ಶ್ರೀ ಕೆ.ಎಂ. ಶಿವಲಿಂಗೇಗೌಡ :- ಸಚಿವರು ಬರಲಿ ನಾವು ಅರ್ಧ ಗಂಟೆ, ಒಂದು ಗಂಟೆ ಕಾಯುತ್ತೇವೆ.

ಅಧ್ಯಕ್ಷರು :- ಸಚಿವರು ಉತ್ತರ ಕೊಟ್ಟ ಮೇಲೆ ನೀವು ಪುನ: ಸ್ಪಷ್ಟೀಕರಣ ಕೇಳಬೇಕಾಗುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಇದು ಬಹಳ important subject. ರೈತರ ಭವಿಷ್ಯದ ಬಗ್ಗೆ ನಿರ್ಧಾರವಾಗಬೇಕಾಗಿರುವುದರಿಂದ ಇದರ ಬಗ್ಗೆ ಪುನ: ಸ್ಪಷ್ಟೀಕರಣ ಕೇಳಬೇಕಾಗುತ್ತದೆ.

ಶ್ರೀ ರುದ್ರೇಶ್‌ಗೌಡ :- ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಸಚಿವರು ಇಲ್ಲ. ಸಚಿವರು ಇಲ್ಲದಿದ್ದರೆ ಅವರು ಹೇಗೆ ಮಾತನಾಡುತ್ತಾರೆ? ಇಲ್ಲದಿದ್ದರೆ ಅಪೂರ್ಣವಾಗುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಮಾನ್ಯ ಅಧ್ಯಕ್ಷರೇ, ಸಚಿವರು ಇದ್ದರೆ ನಮ್ಮನ್ನು ಕರೆಯಬೇಕು. ಬೆಳಿಗ್ಗೆಯಿಂದ ಅಜೆಂಡಾ ಬಿಟ್ಟು ಬೇರೆ ಬೇರೆ ವಿಷಯಗಳನ್ನು ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ.

ಶ್ರೀ ರುದ್ರೇಶ್‌ಗೌಡ :- ಮಾನ್ಯ ಅಧ್ಯಕ್ಷರೇ, ಅಜೆಂಡಾ ಪ್ರಕಾರ ಇದನ್ನು ಪರಿಶೀಲಿಸಬೇಕು. ಇದು ಸದಸ್ಯರ ತಪ್ಪಲ್ಲ. ಸಚಿವರು ಇಲ್ಲ.

ಅಧ್ಯಕ್ಷರು :- ಸದಸ್ಯರ ತಪ್ಪು ಎಂದು ನಾನು ಹೇಳುತ್ತಿಲ್ಲ, ಸಚಿವರು ಇಲ್ಲವೆಂದು ಹೇಳುತ್ತಿದ್ದೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಸಚಿವರನ್ನು ಕರೆಸಿ ಉತ್ತರ ಕೊಡಿಸಿ.

ಅಧ್ಯಕ್ಷರು :- ಆಯಿತು. ಸಚಿವರನ್ನು ಕರೆಸಿ ಉತ್ತರ ಕೊಡಿಸುತ್ತೇನೆ. ಆಯಿತು. ಕಂದಾಯ ಮಂತ್ರಿಗಳು ಬಂದರು. ಮಾತನಾಡಿ.

ಅಧ್ಯಕ್ಷರು :- ಶಿವಲಿಂಗೇಗೌಡರು ಕಂದಾಯ ಸಚಿವರ ಗಮನ ಸೆಳೆಯುವುದು.

ವಿಷಯ: ರೈತರು ಸ್ವಂತ ಜಮೀನಿನ ಖಾತೆ ಪಡೆಯಲು ಸರ್ವೆ ಸ್ಕೆಚ್ ಮಾಡಿಸುವ ಸಂದರ್ಭದಲ್ಲಿ ಆಗುತ್ತಿರುವ ತೊಂದರೆಯ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುವ ಕುರಿತು.

ಶ್ರೀ ಕೆ.ಎಂ. ಶಿವಲಿಂಗೇಗೌಡರು :- ರೈತರು ಸ್ವಂತ ಜಮೀನಿನ ಖಾತೆ ಪಡೆಯಲು ಸರ್ವೆ ಸ್ಕೆಚ್ ಮಾಡಿಸುವ ಸಂದರ್ಭದಲ್ಲಿ ಆಗುತ್ತಿರುವ ತೊಂದರೆಯ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಜಿ. ಕರುಣಾಕರರೆಡ್ಡಿ (ಕಂದಾಯ ಸಚಿವರು) :- ಕರ್ನಾಟಕ ಭೂಕಂದಾಯ ಅಧಿನಿಯಮ 1964ರ ಮತ್ತು ನಿಯಮ 1966ನ್ನು ಸೂಕ್ತವಾಗಿ ತಿದ್ದುಪಡಿ ಮಾಡುವ ಮೂಲಕ ಕರ್ನಾಟಕ ರಾಜ್ಯದಲ್ಲಿ ಮುಟೇಶನ್ ಪೂರ್ವ ನಕ್ಷೆಗಳನ್ನು ಕಡ್ಡಾಯಗೊಳಿಸಲಾಗಿರುತ್ತದೆ. ಯಾವುದೇ ಜಮೀನಿನ ಹಕ್ಕು ವರ್ಗಾವಣೆ ಮುಟೇಶನ್ ಪ್ರಕ್ರಿಯೆ ಮೂಲಕ ಆಗುವ ಸಂದರ್ಭದಲ್ಲಿ ವರ್ಗಾವಣೆಗೆ ಒಳಪಡುವ ಜಮೀನಿನ ವಿಸ್ತೀರ್ಣದ ನಕ್ಷೆಯನ್ನು ಹಾಜರು ಪಡಿಸುವುದು ಮೇಲಿನ ತಿದ್ದುಪಡಿ ಮೇರೆಗೆ ಕಡ್ಡಾಯವಾಗಿರುತ್ತದೆ. ಈ ನಕ್ಷೆಗಳನ್ನು ರೈತರಿಗೆ ತ್ವರಿತವಾಗಿ ವಿತರಿಸಲು ಪರವಾನಗಿ ಭೂಮಾಪಕರ ಯೋಜನೆಯನ್ನು ಮೇಲೆ ನಮೂದಿಸಿದ ತಿದ್ದುಪಡಿಗಳ ಮೂಲಕವೇ ಜಾರಿಗೆ ತರಲಾಗಿದೆ.

ಪ್ರಸ್ತುತ ರಾಜ್ಯದಲ್ಲಿ 3000ಕ್ಕೂ ಮೇಲ್ಪಟ್ಟು ಪರವಾನಗಿ ಭೂಮಾಪಕರು ರಾಜ್ಯದ ವಿವಿಧ ತಾಲ್ಲೂಕುಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಮುಟೇಶನ್ ಪೂರ್ವ ನಕ್ಷೆಗಳನ್ನು ಕೋರಿಕೆ ಸಲ್ಲಿಸಿದ ಗರಿಷ್ಠ ಒಂದು ತಿಂಗಳ ಒಳಗಾಗಿ ತಪ್ಪದೇ ಒದಗಿಸುವ ವ್ಯವಸ್ಥೆ ಕಲ್ಪಿಸಲಾಗಿದೆ. ಕೋರಿಕೆ ಸಲ್ಲಿಸಿದ ಅರ್ಜಿದಾರರ ಆರ್‌ಟಿಸಿ ಗಳಲ್ಲಿ ನ್ಯೂನತೆಗಳಿಲ್ಲದಿದ್ದಲ್ಲಿ ಗರಿಷ್ಠ 10-15 ದಿನಗಳೊಳಗಾಗಿ ಎಲ್ಲಾ ಪ್ರಕರಣಗಳಲ್ಲಿ ಒದಗಿಸಲಾಗುತ್ತಿದೆ.

ರೈತರು ಈ ನಕ್ಷೆ ಕೋರಿ ಸಲ್ಲಿಸುವ ಅರ್ಜಿಗಳಿಗೆ ಸಂಬಂಧಿಸಿದ ಕೆಲವು ಕೈಬರಹದಲ್ಲಿದ್ದ ಆರ್‌ಟಿಸಿಗಳಲ್ಲಿಯೇ ಬಹಳ ವರ್ಷಗಳಿಂದಲೂ ಲೋಪ ದೋಷಗಳಿದ್ದು, ಇಂತಹ ಪ್ರಕರಣಗಳಿಗೆ ಮಾತ್ರ ಗರಿಷ್ಠ ಒಂದು ತಿಂಗಳವರೆಗೂ ಕಾಲಾವಕಾಶ ಬೇಕಿರುತ್ತದೆ. ಆದರೆ ಒಮ್ಮೆ ಆರ್‌ಟಿಸಿಗಳಲ್ಲಿ ಲೋಪಗಳು ಸರಿಪಡಿಸಿದ ನಂತರ ಇನ್ನು ಮುಂದೆ ರೈತರಿಗೆ ಯಾವುದೇ ಸಮಸ್ಯೆಗಳಿರುವುದಿಲ್ಲ. ಲೋಪದೋಷಗಳಿರುವ ಆರ್‌ಟಿಸಿಗಳ ಆಧಾರವಾಗಿಯೇ ನಕ್ಷೆಗಳನ್ನು ಸಿದ್ಧಪಡಿಸಿ

ರೈತರಿಗೆ ಒದಗಿಸಿದಲ್ಲಿ ಮುಂದಿನ ದಿನಗಳಲ್ಲಿ ಭೂ ವ್ಯಾಜ್ಯಗಳು ಹೆಚ್ಚಿಗೆಯಾಗುವ ಸಾಧ್ಯತೆಗಳಿರುತ್ತದೆ. ತಹಶೀಲ್ದಾರ್‌ಗಳಿಗೆ ಈ ಲೋಪಗಳನ್ನು ಸರಿಪಡಿಸಿ ನಕ್ಷೆ ಒದಗಿಸಲು ಸೂಚನೆಯನ್ನು ನೀಡಲಾಗಿದೆ. ನಕ್ಷೆಗಳನ್ನು ಕೋರಿ ಸಲ್ಲಿಸುವ ಅರ್ಜಿಗಳಿಗೆ ಸಂಬಂಧಿಸಿದ ಆರ್‌ಟಿಸಿ ವಿಳಂಬವಿಲ್ಲದೆ ಸರಿಪಡಿಸಿ ರೈತರಿಗೆ ತ್ವರಿತವಾಗಿ ನಕ್ಷೆಗಳನ್ನು ಒಂದು ತಿಂಗಳ ಒಳಗಾಗಿ ಒದಗಿಸಲು ವ್ಯವಸ್ಥೆ ಕಲ್ಪಿಸಲಾಗಿದೆ.

ಈ ವ್ಯವಸ್ಥೆಯನ್ನು ಪಾರದರ್ಶಕ ಹಾಗೂ ಯಾವುದೇ ವ್ಯಕ್ತಿಯ ಹಸ್ತಕ್ಷೇಪವಿಲ್ಲದಂತೆ ರೈತರು ಶೋಷಣೆಗೆ ಒಳಗಾಗದೆ ತ್ವರಿತವಾಗಿ ನಕ್ಷೆಗಳನ್ನು ಸಿದ್ಧಪಡಿಸಿ ವಿತರಿಸುವ ಸಲುವಾಗಿ ಗಣಕಯಂತ್ರದ ಮೂಲಕ ನಿಯಂತ್ರಿಸುವ "ಮೋಜಿಣಿ" ಎಂಬ ತಂತ್ರಾಂಶವನ್ನು ಸಿದ್ಧಪಡಿಸಿ ಈಗಾಗಲೇ ರಾಜ್ಯದ 50 ತಾಲ್ಲೂಕುಗಳಲ್ಲಿ ಅಳವಡಿಸಲಾಗಿದೆ. ಈ ತಂತ್ರಾಂಶವನ್ನು ಅಳವಡಿಸಿರುವ ತಾಲ್ಲೂಕುಗಳಲ್ಲಿ ಅರ್ಜಿಗಳನ್ನು ಕಿಯೋಸ್ಕ್‌ಗಳಲ್ಲಿ ಸ್ವೀಕರಿಸಲಾಗುತ್ತದೆ. ಈ ತಂತ್ರಾಂಶವು ಸರದಿಯ ಮೇರೆಗೆ ಗಣಕಯಂತ್ರದ ಮೂಲಕವೇ ಪರವಾನಗಿ ಭೂಮಾಪಕರಿಗೆ ವಿತರಿಸಲ್ಪಡುತ್ತದೆ. ಇದು ಅಂತರ್‌ಜಾಲ ಆಧಾರಿತ ವ್ಯವಸ್ಥೆಯಾಗಿದ್ದು ಅತ್ಯಂತ ಪಾರದರ್ಶಕವಾಗಿದ್ದು ಯಾರದೇ ಹಸ್ತಕ್ಷೇಪವಿಲ್ಲದೆ ಮೊದಲು ಅರ್ಜಿ ಸಲ್ಲಿಸಿದವರಿಗೆ ಮೊದಲ ಆದ್ಯತೆಯಲ್ಲಿ ನಕ್ಷೆ ಸಿದ್ಧಪಡಿಸಿ ವಿತರಿಸುತ್ತದೆ ಹಾಗೂ ತಮ್ಮ ಅರ್ಜಿಯು ಯಾವ ಹಂತದಲ್ಲಿದೆ ಎಂಬುದನ್ನು ಸಹ ಅರ್ಜಿದಾರರು ಅಂತರ್‌ಜಾಲವನ್ನು ಸಂಪರ್ಕಿಸುವ ಮೂಲಕ ತಿಳಿಯಬಹುದಾಗಿರುತ್ತದೆ. ಈ ತಂತ್ರಾಂಶವನ್ನು ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿಯೂ ಅಳವಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಈ ಹೊಸ ತಂತ್ರಾಂಶ ಆಧಾರಿತ ಮೋಜಣಿ ಪದ್ಧತಿಯು ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳನ್ನು ತಪ್ಪಿಸುವ ದಿಸೆಯಲ್ಲಿ ಪ್ರಮುಖ ಹೆಜ್ಜೆಯಾಗಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ನೀಡಿದಂತಹ ಸ್ಪಷ್ಟನೆಯಲ್ಲಿ ಇವತ್ತು ರೈತರಿಗೆ ಅನುಕೂಲವಾಗುತ್ತಿರುವುದು ಸತ್ಯ. ಇಲ್ಲವೆಂದು ಹೇಳಲಿಕ್ಕಾಗುವುದಿಲ್ಲ. ಆದರೆ ಆ ರೈತರು ಪಡುತ್ತಿರುವ ಬವಣೆಗಳನ್ನು ಸರ್ಕಾರ, ಸನ್ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸ ಬೇಕಾಗುತ್ತದೆ. ಕಾರಣ ಇವತ್ತು ಒಂದು ಗುಂಟೆ ಜಮೀನು ಇರತಕ್ಕಂತಹ ರೈತ. ಆ ಜಮೀನಿನ ಬೆಲೆ ಹಿಂದೆ 403 ರೂ.ಗಳು ಇತ್ತು. ಇವತ್ತು 600 ರೂ.ಗಳನ್ನು ಕಟ್ಟಬೇಕಾದಂಥ ಪರಿಸ್ಥಿತಿ ಒಬ್ಬ ರೈತನಿಗೆ ಬಂದಿದೆ. ಇವತ್ತು ಒಂದು ರೆವಿನ್ಯೂ ಸೈಟನ್ನು ಖರೀದಿ ಮಾಡಬೇಕಾದರೆ, ಒಬ್ಬ ಬಡವ ಇವತ್ತು ಒಂದು ಗುಂಟೆ ಜಮೀನಿಗೆ 600

ರೂ.ಗಳನ್ನು ಕೊಡಬೇಕಾದ ಪರಿಸ್ಥಿತಿ ಇದೆ. ಇವತ್ತು ಅತೀ ಸಣ್ಣ ರೈತರಿಗೆ, ಯಾರು ಆರ್ಥಿಕ ಸಂಕಷ್ಟದ ಮಡಿಲಿನಲ್ಲಿ ಸಿಲುಕಿದ್ದಾರೋ ಅಂಥ ಬಡ ಕುಟುಂಬಗಳಿಗೆ ಇವತ್ತಿನ ದಿವಸ ಈ ರೀತಿಯ ಪರಿಸ್ಥಿತಿಯನ್ನು ಎದುರಿಸಬೇಕಾದಂಥ ಸಂದರ್ಭ ಬಂದಿದೆ. ಇವತ್ತು ಈ ಒಂದು ರಿಯಾಯಿತಿಯನ್ನು ಭೂಮಾಪನ ಮಾಡುವಂಥ ಲೈಸೆನ್ಸ್ ಹೋಲ್ಡರ್ಸ್ ಯಾರು ಇದ್ದಾರೆ, ಅವರ ಮೂಲಕ ಭೂಮಾಪನವನ್ನು ಮಾಡಿಸುತ್ತಾರೆ. ಅದಕ್ಕೆ ಸರ್ಕಾರ 300-00 ರೂ.ಗಳನ್ನು ತೆಗೆದುಕೊಳ್ಳುತ್ತಿದೆಯೆಂದು ತಹಶೀಲ್ದಾರರವರು ಹೇಳುತ್ತಾರೆ. ಆ 300-00 ರೂ.ಗಳಂತೆ ಅವರಿಗೆ ತಿಂಗಳಿಗೆ ಎರಡು ಕೇಸುಗಳನ್ನು ಕೊಟ್ಟಾಗ ಆ 600-00 ರೂ.ಗಳಲ್ಲಿ ಇವತ್ತು ಹಾಸನ ಜಿಲ್ಲೆಯಿಂದ ಗುಲ್ಬರ್ಗಾ ಜಿಲ್ಲೆಗೆ ಹೋಗಿ ಜೀವನ ಮಾಡಲಿಕ್ಕಾಗುವುದಿಲ್ಲ. ಆಗ ಅವರು ಪುನ: ರೈತರನ್ನು ಪೀಡಿಸಬೇಕಾದಂಥ ಸಂದರ್ಭ ಬರುತ್ತದೆ. ಆ ರೈತರು ಈ ಒಂದು ಪರಿಸ್ಥಿತಿಯಲ್ಲಿ ಅವರು ತಮ್ಮ ಜಮೀನಿನ ಸ್ಕೆಚ್ ಅನ್ನು ಮಾಡಿಸಬೇಕಾದರೆ, ಒಂದು ಗುಂಟೆ ನಿವೇಶನಕ್ಕೋಸ್ಕರ ಜಮೀನು ಖರೀದಿಸಬೇಕಾದರೆ ಆ ಜಮೀನು ಮಾರಾಟ ಮಾಡುವಂಥ ವ್ಯಕ್ತಿಗಳಿಗೆ ಮತ್ತು ಖರೀದಿ ಮಾಡುವಂಥ ವ್ಯಕ್ತಿಗಳಿಗೆ ರೈತರ ಕುಟುಂಬಕ್ಕೆ ಬಂದಿರುವಂಥ ಸಂಕಷ್ಟ ಏನಿದೆ ಅದು ನಿಜವಾಗಲೂ ಶೋಚನೀಯವಾದುದು. ಈ ದೇಶದಲ್ಲಿ 55,000 ಕೋಟಿ ರೂ.ಗಳ ಬಜೆಟ್ ಅನ್ನು ಮಂಡಿಸಿ ಆ ರೈತರಿಂದ ಆ ಸ್ಕೆಚ್‌ಗೋಸ್ಕರವಾಗಿ ಹಣವನ್ನು ಅದರಲ್ಲೂ ಸಣ್ಣ ರೈತರಿಂದ ಪಡೆಯದೆ, ದೊಡ್ಡ ರೈತರಿಂದ ಬೇಕಾದರೆ ತೆಗೆದುಕೊಳ್ಳಲಿ ಬೇಡವೆನ್ನುವುದಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಬಿತ್ತನೆ ಬೀಜಕ್ಕೆ ಹಿಂದೆ ಕೊಟ್ಟಂತಹ 1,000 ರೂ.ಗಳ ಸಹಾಯಧನವನ್ನು ಪಡೆಯಬೇಕಾದರೆ ಇವತ್ತಿನ ದಿವಸ ಖಾತೆಯನ್ನು ಕೊಡಬೇಕಾದಂಥ ಪರಿಸ್ಥಿತಿಯನ್ನು ರೈತರು ಎದುರಿಸುತಿದ್ದಾರೆ. ಇವತ್ತಿನ ದಿವಸ ಪ್ರತಿಯೊಂದು ಹಂತಗಳಲ್ಲಿ ಖಾತೆಗಳನ್ನು ಕೇಳತಕ್ಕಂಥ ಸಂದರ್ಭದಲ್ಲಿ ಇವತ್ತೇನು ರೈತಾಪಿ ಕುಟುಂಬಕ್ಕೆ ಅದರಲ್ಲಿಯೂ ಸಣ್ಣ ಹಿಡುವಳಿದಾರರಿಗೆ ಅತ್ಯಾವಶ್ಯಕವಾಗಿ ಸ್ಕೆಚ್ ಬೇಕಾಗಿರುವಂಥ ಪರಿಸ್ಥಿತಿಯಲ್ಲಿ 600-00 ರೂ.ಗಳನ್ನು ಆ ರೈತರು ಕೊಡುವಂಥ ಪರಿಸ್ಥಿತಿಯಲ್ಲಿ ಇದ್ದಾನೆಂಯೇ ಎಂಬ ಬಗ್ಗೆ ಯೋಚನೆಯನ್ನು ನಾವು ಮಾಡಬೇಕಾಗಿದೆ.

ಅದು ಅಲ್ಲದೆ ಆ ಸ್ಕೆಚ್‌ಅನ್ನು ಪಡೆದ ನಂತರ ಎರಡು ತಿಂಗಳುಗಳ ಕಾಲಾವಕಾಶ ಮಾತ್ರ ಅದಕ್ಕೆ ಇರುತ್ತದೆ. ಎರಡು ತಿಂಗಳು ಕಳೆದ ನಂತರ ಪುನ: ಅವನೇನಾದರೂ ಆ ಖಾತೆ ಬದಲಾವಣೆಗೆ ಅರ್ಜಿಯನ್ನು ಸಲ್ಲಿಸದೇ ಹೋದರೆ, ಆ

ಅರ್ಜಿ ಹಾಗೂ ಅವನು ತೆಗೆದುಕೊಂಡಂಥ ಒಂದು ಸ್ಕೆಚ್ ಕಾಪಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಇಂತಹ ಒಂದು ಪರಿಸ್ಥಿತಿ ಇವತ್ತಿನ ದಿವಸ ಇರುವುದರಿಂದ ಹಾಗೂ ಮತ್ತೆ ಇವತ್ತು ಏನು 3,200 ಜನ ಲೈಸೆನ್ಸ್ ಪಡೆದು ಭೂಮಾಪನ ಮಾಡತಕ್ಕಂಥವರು ಇಲಾಖೆಯಲ್ಲಿದ್ದಾರೆ. ಅವರ ಪರಿಸ್ಥಿತಿಯು ಕೂಡ ದಾರುಣವಾದಂಥ ಪರಿಸ್ಥಿತಿ ಆಗಿದೆ. ಅವರನ್ನು ಈ ಸರ್ಕಾರ ನಿಜವಾಗಲೂ ಖಾಯಂ ಮಾಡಿ ಸಣ್ಣ ರೈತರಿಗೆ, ಅತೀ ಸಣ್ಣ ರೈತರಿಗೆ ಪುಕ್ಕಟೆಯಾಗಿ ಸರ್ವೆ ಸ್ಕೆಚ್ ಅನ್ನು ಮಾಡಿಸಿ ಪಕ್ಕಾ ಪೋಡಿ ಮಾಡುವುದನ್ನು ನಾನು ಬೇಡವೆಂದು ಹೇಳುವುದಿಲ್ಲ. ಇದು ಬಹಳ ಒಳ್ಳೆಯ ಕೆಲಸ ಅದನ್ನು ಮಾಡಿದರೆ ಅನುಕೂಲ. ಆದರೆ, ರೈತ ಈ ಪರಿಸ್ಥಿತಿಯಲ್ಲಿದ್ದಾನೆ ಎಂದು ನಾವು ಯೋಚನೆ ಮಾಡಬೇಕಾಗುತ್ತದೆ. 600 ರೂಪಾಯಿಗಳನ್ನು ಕೊಡತಕ್ಕಂಥ ಚೈತನ್ಯ ರೈತನಿಗೆ ಇದೆಯೇ? ಒಂದೇ ಸರ್ವೆ ನಂಬರ್‌ಗೆ ಕೆಲವು ಸಲ 4-5 ನಂಬರ್‌ಗಳು ಹಾಗೂ ಕೆಲವು ಸಲ 10 ನಂಬರ್‌ಗಳಿದ್ದರೆ 6000 ರೂಪಾಯಿಗಳನ್ನು ಕಟ್ಟಬೇಕಾದ ಪರಿಸ್ಥಿತಿ ಇವತ್ತಿನ ದಿವಸ ಇದೆ. ಒಂದು ಸರ್ವೆ ನಂಬರ್‌ನಲ್ಲಿ ಒಂದು ಗುಂಟೆ ಇದ್ದರೂ 600 ರೂಪಾಯಿಗಳನ್ನು ಕಟ್ಟಬೇಕಾಗುತ್ತದೆ. ಇಂತಹ ಪರಿಸ್ಥಿತಿ ಇದೆ. ದಯಮಾಡಿ ಈ ಒಂದು ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಸರ್ಕಾರ ಆ ಕಾನೂನನ್ನು ಹಿಂದಕ್ಕೆ ಪಡೆದು, ರೈತರ ಬಗ್ಗೆ ಕಾಳಜಿಯನ್ನು ತೋರಿಸಿ, ಅತೀ ಸಣ್ಣ ರೈತರು ಯಾರ್ಯಾರು ಇವತ್ತು ಆರ್ಥಿಕ ಸಂಕಷ್ಟದಲ್ಲಿದ್ದಾರೆ, ಅಂತಹವರ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಿ, ದಯಮಾಡಿ ಆ ಕಾನೂನನ್ನು ಹಿಂದಕ್ಕೆ ಪಡೆದು ಸಣ್ಣ ರೈತರಿಗೆ ಅದರಲ್ಲೂ ಮುಖ್ಯವಾಗಿ ಅತೀ ಸಣ್ಣ ರೈತರಿಗೆ ಅನುಕೂಲ ಮಾಡಿಕೊಡಬೇಕು.

ಶ್ರೀ ಜಿ. ಕರುಣಾಕರರೆಡ್ಡಿ (ಕಂದಾಯ ಸಚಿವರು) :- ಮಾನ್ಯ ಸಭಾಧ್ಯಕ್ಷರೇ, ಗೌರವಾನ್ವಿತ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಸಣ್ಣ ಜಾಗ ಇರುವ ರೈತರು ಬಡವರಾಗಿರುವುದರಿಂದ ಬಹಳ ಕಷ್ಟವಾಗುತ್ತದೆ. ಖಂಡಿತವಾಗಿ ಸರ್ಕಾರ ಇದರ ಬಗ್ಗೆ ಗಮನಹರಿಸುತ್ತದೆ. ಯಾವ ರೀತಿಯಲ್ಲಿ ಹಣ ಕಡಿಮೆ ಮಾಡಬೇಕು ಹಾಗೂ ಎಷ್ಟು ಪ್ರಮಾಣದಲ್ಲಿ ಹಣವನ್ನು ಕಡಿಮೆ ಮಾಡಬೇಕು ಎನ್ನುವುದನ್ನು ಖಂಡಿತ ನಾವು ತಿದ್ದುಪಡಿ ಮಾಡಿ ನಿರ್ದಿಷ್ಟವಾದ ವಿಚಾರಕ್ಕೆ ಬರುತ್ತೇವೆ. ಜನತಾದಳದ ಸರ್ಕಾರ ಇದ್ದಾಗ ಮುಖ್ಯವಾಗಿ 1998-99ನೇ ಇಸವಿಯಲ್ಲಿ ಈ ಕಾನೂನನ್ನು ಮಾಡಿರುವುದು. ಸನ್ಮಾನ್ಯ ಜೆ.ಹೆಚ್.ಪಟೇಲ್‌ರವರು ಮುಖ್ಯಮಂತ್ರಿಯಾಗಿದ್ದಾಗ ಹಾಗೂ ಮಾನ್ಯ ಸೋಮಶೇಖರ್‌ರವರು ಕಂದಾಯ ಸಚಿವರಾಗಿದ್ದಾಗ ಈ ತಿದ್ದುಪಡಿಯನ್ನು ಮಾಡಿದ್ದರು. ಇದರ ಮುಖ್ಯ

ಉದ್ದೇಶವೇನೆಂದರೆ, ರೈತರ ನಡುವೆ ಜಗಳವಾಗಬಾರದು. ಇದು ಮುಂದೆ ಪೊಲೀಸ್ ಇಲಾಖೆಗೆ ಹಾಗೂ law and orderಗೆ ತೊಂದರೆಯಾಗಬಾರದು ಎನ್ನುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದಾರೆ. ಇದು ಬಹಳ ಒಳ್ಳೆಯ ವಿಚಾರಕ್ಕೆ ಮಾಡಿರುವುದು ಎಂದು ಮಾನ್ಯ ಸದಸ್ಯರು ಕೂಡ ಹೇಳುತ್ತಿದ್ದಾರೆ. ಪರವಾನಗೆ ಪಡೆದ ಭೂಮಾಪಕರಿಗೆ ಕೇವಲ 2 ಕೇಸ್‌ಗಳು ಸಿಗುತ್ತಿವೆ. ಅವರು 600 ರೂಪಾಯಿಗಳಿಂದ ಗುಲ್ಬರ್ಗಾಕ್ಕೆ ಹೋಗಿ ಜೀವನ ಮಾಡುವುದಕ್ಕಾಗುವುದಿಲ್ಲ. ಪರವಾನಗೆ ಪಡೆದ ಭೂಮಾಪಕರಿಗೆ ಕನಿಷ್ಠ ಪಕ್ಷ ತಿಂಗಳಿಗೆ 7000 ರೂ.ಗಳು ಸಂಬಳ ಸಿಗುವ ಹಾಗೆ 20 ರಿಂದ 25 ಕೇಸ್‌ಗಳನ್ನು ಅವರಿಗೆ ಕೊಟ್ಟು ಅದರಿಂದ ಅವರು ಜೀವನ ಮಾಡಬೇಕೆಂಬ ಉದ್ದೇಶದಿಂದ ಮಾಡಿದ್ದೇವೆ ಹಾಗೂ ಅದೇ ರೀತಿ ಕೊಡುತ್ತಿದ್ದೇವೆ. ಎಲ್ಲಾದರೂ ನಿರ್ದಿಷ್ಟವಾಗಿ ಕಡಿಮೆ ಅಂದರೆ, 2 ರಿಂದ 3 ಕೇಸ್‌ಗಳು ಸಿಗುತ್ತಿರುವುದು ಎಲ್ಲಾದರೂ ನಿಮ್ಮ ಗಮನಕ್ಕೆ ಬಂದಿದ್ದರೆ ಹಾಗೂ ಅದು ಎಲ್ಲಿ ನಡೆಯುತ್ತಿದೆ ಎಂದು ತಿಳಿಸಿದರೆ ಖಂಡಿತವಾಗಿಅವುಗಳನ್ನು ಸರಿಪಡಿಸುತ್ತೇವೆಂದು ಈ ಸಭೆಯ ಮೂಲಕ ತಿಳಿಸುತ್ತಿದ್ದೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಬೆಂಗಳೂರಿನಲ್ಲಿ ದರಣಿ ಸತ್ಯಾಗ್ರಹ ಹೂಡಿದ್ದಾರೆ. ಅವರುಗಳು ನಿಜವಾಗಲೂ ವಿಷ ಸೇವಿಸತಕ್ಕಂಥ ಪರಿಸ್ಥಿತಿಗೆ ಬಂದಿದ್ದಾರೆ. ದಯಮಾಡಿ ತಾವು ಅರ್ಥಮಾಡಿಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಸಹ ಅಲ್ಲಿಗೆ ಭೇಟಿ ನೀಡಿದ್ದಾರೆ. ಅವರಿಗೆ ಖಾಯಂ ಮಾಡಿಸುತ್ತೀರೋ ಅಥವಾ ಯಾವ ಆಧಾರದ ಮೇಲೆ ಮಾಡುತ್ತೀರೊ ಮಾಡಿ. ಅವರ ಜೀವನಕ್ಕೆ ದಾರಿ ತೋರಿಸಿಕೊಡಬೇಕಾದ ಅತೀ ಅವಶ್ಯಕತೆ ಇದೆ. ಯಾವುದೇ ಕಾರಣಕ್ಕೂ ಸಣ್ಣ ರೈತರಿಗೆ ಹಾಗೂ ಅತೀ ಸಣ್ಣ ರೈತರಿಗೆ ಖಾತೆ ಮಾಡುವುದಕ್ಕೆ ಹಣವನ್ನು ದಯಮಾಡಿ ವಿಧಿಸಬೇಡಿ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು :- ಇದು ಗಮನ ಸೆಳೆಯುವ ಸೂಚನೆ ಯಾರೂ ಚರ್ಚೆ ಮಾಡಬಾರದು.

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ) :- ಇದು ಬಹಳ ಮುಖ್ಯವಾದುದು. ರಾಜ್ಯದಲ್ಲಿ ಬಹಳ ಗಂಭೀರವಾದಂಥ ವಿಚಾರ. ರೈತರ ಬದುಕಿಗೆ ಬಹಳ ಮುಖ್ಯವಾದುದು. ರೈತ ಕೋರ್ಟ್ ಹಾಗೂ ಕಚೇರಿಗಳಿಗೆ ಹೋಗುವುದನ್ನು ನಿಲ್ಲಿಸಬೇಕು. ಗಲಾಟೆ ಆಗುತ್ತಿರುವುದನ್ನು ನಿಲ್ಲಿಸಬೇಕು. ಈಗ ಮಂತ್ರಿಗಳು ಕೆಲವು

ಕ್ರಮಗಳನ್ನು ಕೈಗೊಂಡಿದ್ದಾರೆ. ಪೋಡಿ ಮಾಡುವ ಬಗ್ಗೆ ರೈತರ ಎಲ್ಲೆಲ್ಲಿ ಅರ್ಜಿಗಳಿವೆ, ಸಮಸ್ಯೆಗಳಿವೆ ಅವುಗಳೆಲ್ಲವನ್ನೂ ಏಲೇ ಮಾಡುತ್ತೇನೆ ಎಂದು ಹೇಳಿದ್ದೀರಿ ಹಾಗೂ ಜಾಹಿರಾತನ್ನು ಕೂಡ ಕೊಟ್ಟಿದ್ದೀರಿ ಬಹಳ ಸಂತೋಷ. ಆದರೆ, private agencyಗೆ ತಾವು ಇದನ್ನು ಕೊಟ್ಟಿದ್ದೀರಿ. ಏಕೆಂದರೆ, ಎಲ್ಲವನ್ನೂ ಕಂಪ್ಯೂಟರ್‌ನಲ್ಲಿ ಮಾಡಲಿಕ್ಕೆ ಸಾಧ್ಯವಿಲ್ಲ. ಎಲ್ಲವನ್ನು ಖಾಸಗಿಯವರಿಂದ ಮಾಡಿಸಲಿಕ್ಕೆ ಸಾಧ್ಯವಿಲ್ಲ. ಇದು ಒಂದು Regulating Authority ಮಾಡುವಂತಹ ಕೆಲಸ. ಒಬ್ಬ ತಹಶೀಲ್ದಾರನಿಗೆ ಏನು ಹಕ್ಕು ಇರುತ್ತದೋ ಅದೇ ರೀತಿ ಒಬ್ಬ Village Accountantಗೂ ಹಾಗೂ ಒಬ್ಬ ಅಳತೆ ಮಾಡುವಂಥವನಿಗೂ ಸಹ ತನ್ನದೇ ಆದಂತಹ ಶಕ್ತಿಯನ್ನು ಸರ್ಕಾರ ಮೊದಲಿನಿಂದಲೂ ಕೊಟ್ಟುಕೊಂಡು ಬಂದಿದೆ. ಈಗ ತಾವು privateನವರಿಗೆ ಕೊಟ್ಟು ಕೆಲಸವನ್ನು ಮಾಡಿಸುವುದಕ್ಕೆ ಹೊರಟಿದ್ದೀರಲ್ಲಾ. ಏನಾದರೂ ಹೆಚ್ಚು ಕಡಿಮೆ ಆದರೆ, Appealing Authority ಯಾರು? ಇದು ಬಹಳ ದೊಡ್ಡ ಪ್ರಶ್ನೆಯಾಗಿದೆ. ಕೆಲವು Officers misguide ಮಾಡುತ್ತಿದ್ದಾರೆ. ರೈತನು ನಂತರ Registrationಗೆ ಹೋಗುತ್ತಾನೆ, ತಕ್ಷಣ ಖಾತೆಯಾಗುತ್ತದೆ. ಹಳ್ಳಿಗಳಲ್ಲಿ ನಾನೂ ಕೂಡ Land Grant Committee Chairman ಆಗಿ ಕೆಲಸ ಮಾಡಿದ್ದೇನೆ. ಬಹಳ pending ಇದೆ. ಅದನ್ನು ಯಾವ ರೀತಿ ಮಾಡಬೇಕು ಎಂದು ಯೋಚನೆ ಮಾಡಿ. Privateನವರ ಕೈಯಲ್ಲಿ ಕೆಲಸ ಮಾಡಿಸುವುದರಿಂದ ರೈತನಿಗೆ ಒಳ್ಳೆಯದು ಆಗುವುದಿಲ್ಲ. ನಿಮ್ಮ ಇಲಾಖೆಯ ಅಧಿಕಾರಿಗಳಿಂದ ಈ ಕೆಲಸವನ್ನು ಮಾಡಿಸಬೇಕು. ಅವರ ನೌಕರರಿಂದ ಈ ಕೆಲಸಗಳನ್ನು ಮಾಡಿಸಬೇಕು. ಮತ್ತೆ privateನವರಿಗೆ ಕೊಟ್ಟರೆ ಈಗ ಏನು ಹಸಿರು ಕಾರ್ಡ್, ಹಳದಿ ಕಾರ್ಡ್ ಹಂಚಲಿಕ್ಕೆ ಆಗುತ್ತಿದೆಯಲ್ಲಾ Identification card ಹಂಚಿ ಒಂದು ಕಡೆ 2000 ಕಾರ್ಡ್, ಇನ್ನೊಂದು ಕಡೆ 3000 ಕಾರ್ಡ್ ಹೀಗೆ ದೊಡ್ಡ ವಿಷಯವಾಗುತ್ತದೆ. ಇವತ್ತು ಯಾರು ದರಣಿ ಕೂತಿದ್ದಾರೆ ಆ ದರಣಿ ಕೂತಿರುವುದರಲ್ಲಿ ಸತ್ಯಾಂಶವಿದೆ. ಆ ಹೋರಾಟದಲ್ಲಿ ಸತ್ಯಾಂಶವಿದೆ. ಸಂಪೂರ್ಣವಾಗಿ ಅವರ ಪರವಾಗಿ ಬೆಂಬಲವನ್ನು ಕೊಡುತ್ತಿದ್ದೇವೆ. ಏನು ನಿಮ್ಮಿಂದ ಸಸ್ಪೆಂಡ್ ಮಾಡಿಸಿದ್ದಾರೆ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಮುಂದಕ್ಕೆ ಈ Regulating Authority ಯನ್ನು Private ನವರಿಗೆ ಮಾಡಲಿಕ್ಕೆ ಅವಕಾಶ ಕೊಡಬಾರದು. ನಾವು ಇದರ ವಿರುದ್ಧವಾಗಿ ಚಳುವಳಿಯನ್ನು ರೂಪಿಸಬೇಕಾಗುತ್ತದೆ. ಆದ್ದರಿಂದ, ಮಂತ್ರಿಗಳು ತಾವು

ಒಳ್ಳೆಯವರಿದ್ದೀರಿ, ಜವಾಬ್ದಾರಿ ಇರುವವರಾಗಿದ್ದೀರಿ ಹಾಗೂ ರೈತರಿಗೆ ಸಹಾಯ ಮಾಡಬೇಕೆಂಬ ಕಳಕಳಿ ತಮಗೆ ಇದೆ. ಈ ಅಧಿಕಾರಿಗಳ ಕಪಿಮುಷ್ಟಿಯಿಂದ ತಾವು ದೂರ ಹೋಗಬೇಕು. ಈ ಸಂದರ್ಭದಲ್ಲಿ ಅಧ್ಯಕ್ಷರ ಮುಖಾಂತರ ಮನವಿ ಮಾಡಿಕೊಳ್ಳುವುದೇನೆಂದರೆ, ಇಲಾಖೆಯ ನೌಕರರು ಈ ಕೆಲಸವನ್ನು ಮಾಡಬೇಕು. ನಾನು ಬೇರೆ ವಿಚಾರವನ್ನು ಮಾತನಾಡುವಾಗ ಈ ವಿಷಯವನ್ನು ತೆಗೆದುಕೊಂಡು ಮಾತನಾಡಬೇಕು ಎಂದುಕೊಂಡಿದ್ದೆ. ಆದರೆ, ಮಾನ್ಯ ಶಿವಲಿಂಗೇಗೌಡರು ಈ ವಿಷಯವನ್ನು ಚರ್ಚೆಗೆ ತೆಗೆದುಕೊಂಡಿದ್ದರಿಂದ ಹಾಗೂ ಅಧ್ಯಕ್ಷರು ನನಗೆ ಅವಕಾಶ ಕಲ್ಪಿಸಿಕೊಟ್ಟಿದ್ದರಿಂದ ನಾನು ಈ ವಿಷಯವನ್ನು ಮಾತನಾಡಲು ಅವಕಾಶವಾಯಿತು.

ಅಧ್ಯಕ್ಷರು :- ಸೋಮಣ್ಣನವರೇ ದಯವಿಟ್ಟು ಮಾತನಾಡಬೇಡಿ. ಇದು ಗಮನ ಸೆಳೆಯುವ ಸೂಚನೆ. ನಾನು ನಿಮಗೆ ಮಾತನಾಡಲು ಅವಕಾಶ ಕೊಡುವುದಿಲ್ಲ. ಈ ರೀತಿ ನಿಮಗೆ ಅವಕಾಶ ಕೊಟ್ಟರೆ ಎಲ್ಲರೂ ಮಾತನಾಡುತ್ತಾರೆ. ಇದು ಗಮನ ಸೆಳೆಯುವ ಸೂಚನೆಯಾದ್ದರಿಂದ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ತಾವುಗಳು ಕೂಡ ಬೇರೆ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಂಡು ಬನ್ನಿ. ತಾವು ಆ ನಂತರ ರಾಜ್ಯಪಾಲರ ಭಾಷಣದಲ್ಲಿ ಮಾತನಾಡಿ. ಕಂದಾಯ ಮಂತ್ರಿಗಳು ಈಗ ಉತ್ತರ ಹೇಳಿ. ಮಾನ್ಯ ಜಯಚಂದ್ರರವರೆ, ಬೇಡ ಈಗ ನೀವು ಮಾತನಾಡುವುದು ಬೇಡ. ಈಗ ನಿಮಗೆ ಅವಕಾಶ ಕೊಟ್ಟರೆ ಎಲ್ಲರೂ ಮಾತನಾಡಲು ಅವಕಾಶ ಕೇಳುತ್ತಾರೆ. ಎಲ್ಲರೂ ಇಲ್ಲಿ participate ಮಾಡುವುದಾದರೆ ಅರ್ಥವಿರುವುದಿಲ್ಲ. ಯಾವ ಸದಸ್ಯರು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದಾರೆ ಅವರು ಮಾತ್ರ ಮಾತನಾಡಬೇಕು.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) :- ಅಧ್ಯಕ್ಷರೆ, ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಇದು ಬಹಳ ಮಹತ್ವವಾದ ವಿಷಯ. 5 ದಿವಸಗಳ ಅಧಿವೇಶನ ಇರುವುದರಿಂದ ಮಾತನಾಡಲು ಸಮಯಾವಕಾಶ ಬಹಳ ಕಡಿಮೆ ಇದೆ. ಇಡೀ ರಾಜ್ಯದ ರೈತರಿಗೆ ಸಹಾಯವಾಗಬೇಕಾದಂಥ ವಿಚಾರ ಇದೆ. ರೈತರ ಹಿತದೃಷ್ಟಿಯಿಂದ ಮಾತನಾಡಲು ತಾವು ಅನುಮತಿಯನ್ನು ಕೊಡಬೇಕು.

ಅಧ್ಯಕ್ಷರು :- ನೀವು ರಾಜ್ಯಪಾಲರ ಭಾಷಣದಲ್ಲಿ ಇದನ್ನು ಪ್ರಸ್ತಾಪ ಮಾಡಿ. ಎಲ್ಲರಿಗೂ ನಾನು ಅವಕಾಶ ಕೊಟ್ಟಿದ್ದೇನೆ. ಗಮನ ಸೆಳೆಯುವ ಸೂಚನೆ ಯಾರು ಕೊಟ್ಟಿದ್ದಾರೆ ಅವರಿಗೆ ಮಾತ್ರ ಮಾತನಾಡಲು ಅವಕಾಶ ಕೊಡಬೇಕಾಗುತ್ತದೆ. ಆ ನಿಯಮವನ್ನು ಮೀರಿ ಹೋಗುವುದಕ್ಕಾಗುವುದಿಲ್ಲ.

ಶೀ ಟಿ.ಬಿ. ಜಯಚಂದ್ರ :- ಮಾನ್ಯ ಸಚಿವರಲ್ಲಿ ನಾನು ಒಂದೇ ಪ್ರಶ್ನೆಯನ್ನು ಕೇಳುತ್ತೇನೆ. ಒಂದೊಂದು ಸರ್ವೆ ನಂಬರ್‌ಗೆ ಒಂದು ಸ್ಕೆಚ್ ಕೊಡಬೇಕು. Suppose ಯಾರದ್ದಾದರೂ ಎರಡು ಎಕರೆ ಜಮೀನು ಇದ್ದರೆ ಹಾಗೂ ಅವರದ್ದು 5 ಸರ್ವೆ ನಂಬರ್ ಇದ್ದರೆ 5X6=3000 ರೂಪಾಯಿಗಳನ್ನು ಅವರು ಕಟ್ಟಬೇಕಾಗುತ್ತದೆ. ನಿಮ್ಮ ಸ್ಕೆಚ್‌ಗೆ ಅವರು ಕಟ್ಟುವ ಹಣ ಆ ಜಮೀನಿನ ಬೆಲೆಯಾಗುತ್ತದೆ. ಸರ್ವೆ ನಂಬರ್ ವೈಸ್ ಹಣ ಪಾವತಿಸುವುದು ಬೇಡ. ಆದರೆ, extent-wise ಮಾಡಿ. ಆಗ ಈ ಸಮಸ್ಯೆ ಪರಿಹಾರವಾಗುತ್ತದೆ. ಎರಡನೆಯದಾಗಿ, ಭೂಮಾಪಕರಿಗೆ ಯಾರಿಗೂ ಕನಿಷ್ಠ ಎರಡು ಕೇಸ್ ಸಿಗುತ್ತಿಲ್ಲ. ಕನಿಷ್ಠ 20 ಕೇಸ್‌ಗಳು ಕೊಡಬೇಕೆಂದು ನೀವು ಮಾಡಿದ್ದೀರಿ. ಕನಿಷ್ಠ 20 ಕೇಸ್‌ಗಳನ್ನು ನೀವು ಕೊಡುವುದಕ್ಕಾಗುವುದಿಲ್ಲವೆಂದರೆ, ಸರ್ಕಾರದಿಂದ ಅವರಿಗೆ ಸಂಬಳವಾದರೂ ಕೊಡಬೇಕಲ್ಲವೇ? ಅದನ್ನಾದರೂ ನೀವು ಕೊಡಬೇಕು. ಈ ರೀತಿ ಮಾಡುವುದು ಸರಿಯಲ್ಲ. ಅದಕ್ಕೆ ತಮ್ಮ ಉತ್ತರವನ್ನು ಹೇಳಬೇಕು.

ಶ್ರೀ ಜೆ. ಕರುಣಾಕರರೆಡ್ಡಿ :- ಸನ್ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದಂಥ ಡಿ.ಕೆ. ಶಿವಕುಮಾರ್‌ರವರು, ಮಾನ್ಯ ಜಯಚಂದ್ರರವರು, ಏನು ಪ್ರಸ್ತಾಪ ಮಾಡಿದ್ದಾರೆ, ಇವತ್ತು Licensed private surveyors ಎಂದು ಹೇಳಿದ್ದಾರೆ ಅದು ತಪ್ಪಾಗುತ್ತದೆ. Licensed Surveyors ಎಂದು ಹೇಳಿ ಅವರನ್ನು appoint ಮಾಡಿಕೊಂಡು, ಅವರಿಗೆ license ಕೊಟ್ಟು ಅವರಿಗೆ ಯಾವ ರೀತಿ survey ಮಾಡಬೇಕೆಂದು ತರಬೇತಿ ಕೊಟ್ಟು, ಅವರನ್ನು fieldಗೆ ಕಳುಹಿಸುತ್ತಿದ್ದೇವೆ. ಅವರಿಗೆ ಜವಾಬ್ದಾರಿ ಇರುತ್ತದೆ. ತಪ್ಪು ಮಾಡಿದರೆ ಅವರ ಮೇಲೆ criminal case ಹಾಕುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ. ಆಮೇಲೆ ಅವರು ಮಾಡಿದಂಥ ಸ್ಕೆಚ್ ಅವರು ಏನು ಸರ್ವೆ ಮಾಡಿ ಸ್ಕೆಚ್ ತಯಾರು ಮಾಡುತ್ತಾರೆ, ಅದನ್ನು ನಮ್ಮ ಸರ್ಕಾರಿ surveyor ಕೂಡ ಪರಿಶೀಲನೆ ಮಾಡಿ ಸೀಲ್ ಹಾಕಿ sign ಮಾಡಿ ಕೊಡುತ್ತಾರೆ. ಅದರ ಮೇಲೆ ತಹಶೀಲ್ದಾರ್ ಕೂಡ sign ಮಾಡುತ್ತಾರೆ. ಅದರಿಂದ ಸರ್ಕಾರಕ್ಕೆ ಒಂದು ಜವಾಬ್ದಾರಿ ಇದೆ. ಅವರು ಆ ರೀತಿಯಲ್ಲಿ ತಪ್ಪಾಗಿ ಕೊಟ್ಟರೆ ಖಂಡಿತವಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ತಾವು ಅಧಿಕಾರಿಗಳ ಕಪಿಮುಷ್ಟಿಯಲ್ಲಿದ್ದಾರೆ ಎಂದು ಹೇಳುತ್ತಿದ್ದೀರಿ.

ಖಂಡಿತ ಕಂದಾಯ ಸಚಿವನಾದ ನಾನು ಯಾವುದೇ ರೀತಿಯಲ್ಲಿ ಅಧಿಕಾರಿಗಳ ಕಪಿಮುಷ್ಟಿಗೆ ಹೋಗುವ ಪ್ರಶ್ನೆಯೇ ಇಲ್ಲ. ಜನ ಹಿತ, ಈ ರಾಜ್ಯದ ರೈತರ ಹಿತ ಕಾಪಾಡಲಿಕ್ಕೆ ನಮ್ಮ ಸರ್ಕಾರ ಇದೆ.

ಶ್ರೀ ಡಿ.ಕೆ ಶಿವಕುಮಾರ್ :- ನಿಮ್ಮ ಬದ್ಧತೆ, ನಿಷ್ಠೆ ಮತ್ತು ನಿಮ್ಮ ಪ್ರಾಮಾಣಿಕತೆಯನ್ನು ಒಪ್ಪುತ್ತೇವೆ. ಸರ್ವೆ ಮತ್ತು ಪೋಡಿ ಮಾಡುವುದನ್ನು private ಅವರಿಗೆ ಕೊಟ್ಟು ಅವರ ಕಪಿಮುಷ್ಠಿಗೆ ಸಿಕ್ಕಿ ಹಾಕಿಕೊಳ್ಳುತ್ತೀರಾ? Appealing Authority ಯಾರು ಸ್ವಾಮಿ? ಆಮೇಲೆ ಕೋರ್ಟ್‌ಗೆ ಹೋಗಬಾಕಾಗುತ್ತದೆ.

ಶ್ರೀ ಜಿ ಕರುಣಾಕರ ರೆಡ್ಡಿ :- Privateನವರು ಎನ್ನುವ ಪ್ರಶ್ನೆಯೇ ಇಲ್ಲ. ಅವರು licensed Surveyors. ಅವರಿಗೆ Training ಕೊಟ್ಟು License ಕೊಟ್ಟು ಅವರು ಮಾಡುವುದನ್ನು ಪರಿಶೀಲಿಸಲು ಅವರ ಮೇಲೆ ನಮ್ಮ Government Surveyor ಸಹಾ ಇದ್ದಾರೆ. ಅವರ ನಂತರ ತಹಶೀಲ್ದಾರರು ಇದ್ದಾರೆ. ಅವರೆಲ್ಲ authentic ಆಗಿ check ಮಾಡುತ್ತಾರೆ. Private ನವರು ಒಂದು ಸಲ ತಪ್ಪು ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ. ಆ ರೀತಿ ತಪ್ಪು ಮಾಡಿದ್ದಾರೆ ಎನ್ನುವ ಮಾಹಿತಿ ಬಂದರೆ ನಾವು ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇವೆ.

SHRI D.K. SHIVAKUMAR :- You are going wrong to the records. ಅವರು ತಮ್ಮನ್ನು ತಪ್ಪು ದಾರಿಗೆ ಎಳೆಯುತ್ತಾರೆ. ಏಕೆಂದರೆ, ಹಿಂದೆ ಬ್ರಿಟಿಷರ ಕಾಲದಿಂದಲೂ ಇದು ನಡೆದುಕೊಂಡು ಬಂದಿದೆ. ಈ ದೇಶದ Boundary, ರಾಜ್ಯದ Boundary, ಜಮೀನಿನ Boundary ಅಷ್ಟು ಸಲೀಸಾಗಿಲ್ಲ. ಅದನ್ನು ಯಾರೂ ಒಪ್ಪುವುದಿಲ್ಲ. ದಯವಿಟ್ಟು ಅದನ್ನು ಮರು ಪರಿಶೀಲನೆ ಮಾಡಿ. ಬೇಕಾದರೆ ಐದಾರು ಜನ ಸದಸ್ಯರನ್ನು ಕರೆಸಿ. You please call a meeting of us. ನಾವು ಚರ್ಚೆ ಮಾಡುತ್ತೇವೆ. ಈ Officers ಮಾತನ್ನು ಕೇಳಿ ಯಾರೋ ಒಬ್ಬ ಅಲ್ಲಿ ಬೇಕಾದವನಿಗೆ Contract ಕೊಡುವುದಕ್ಕೋಸ್ಕರ ಈ comment ನ್ನೆಲ್ಲ ಮಾಡಿದರಲ್ಲ ಈ ರೀತಿ misguide ಮಾಡುತ್ತಾರೆ. ಪೋಡಿ ಸಮಸ್ಯೆ ಸರಿ ಮಾಡಬೇಕು, ಈ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಒಳ್ಳೆಯ ಕೆಲಸ ಮಾಡಲಿಕ್ಕೆ ಹೊರಟಿದ್ದೀರಿ.ಇದರಲ್ಲಿ time ತೆಗೆದುಕೊಂಡಿರುವುದಂತು ಸತ್ಯ. ಆದರೆ, ತಮ್ಮನ್ನು ಯಾವ ದಿಕ್ಕಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ ಅದು ಸರಿಯಿಲ್ಲ. ಇದನ್ನು ಚಿಂತನೆ ಮಾಡಿ. You please re-examine. Call your friends.

ಶ್ರೀ ಜಿ. ಕರುಣಾಕರ ರೆಡ್ಡಿ :- ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದರ ಬಗ್ಗೆ ಖಂಡಿತ ಚಿಂತನೆ ಮಾಡುತ್ತೇನೆ. ಅವರನ್ನೂ ಸಭೆಗೆ ಕರೆದು ಚರ್ಚೆ ಮಾಡಿ ಅವರ ಸಲಹೆಗಳನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಅಲ್ಲಿ ನಡೆಯುತ್ತಿರುವ ಅವಾಂತರ ಹಾಗೂ ಸಂಕಷ್ಟಗಳನ್ನು ನೋಡಿ ಈ ವಿಚಾರದ ಬಗ್ಗೆ ಗಮನ ಸೆಳೆದಿದ್ದೇವೆ. ಪ್ರತಿನಿತ್ಯ ಅವರು ಏನು ಮಾಡುತ್ತಿದ್ದಾರೆ ಎಂಬ ಬಗ್ಗೆ ಈಗ ಗಮನವನ್ನು ಸೆಳೆದಿದ್ದೇವೆ. ಗಮನ ಸೆಳೆದ ಮೇಲೆ ಅದು ಸರಿ ಹೋಗಬೇಕು. ಆದುದರಿಂದ ದಯಮಾಡಿ ಅಲ್ಲಿ ನಡೆಯುತ್ತಿರುವ ಸನ್ನಿವೇಶವನ್ನು ಸರಿಪಡಿಸಬೇಕು. ಅಲ್ಲಿ ಎರಡು ಭಾಗವಾಗಿದೆ. Government Surveyor, ಖಾಸಗಿ Surveyor. ಇವರಿಗೆ ನೀವು license ಕೊಟ್ಟಿದ್ದೀರಿ ಅಷ್ಟೆ. ಹಗ್ಗವಿಲ್ಲ, ಮೂಗು ದಾರವಿಲ್ಲ. ಒಂದು ವೇಳೆ ಅವನು ತಪ್ಪು ಮಾಡಿ ಯಾರೋ ಒಬ್ಬ ರೈತನಿಗೆ ಹತ್ತು ಸಾವಿರ ಕೊಟ್ಟು ಹೆಚ್ಚು ಕಡಿಮೆ ಮಾಡಿ ಪೋಡಿ ಮಾಡಿಕೊಟ್ಟರೆ ಅವನ ಮೇಲೆ ಕಾನೂನು ಮಾಡಿ ಕೇಸ್ ಅನ್ನು ಹಾಕುವುದರೊಳಗೆ ರೈತನ ಪರಿಸ್ಥಿತಿ ಏನಾಗುತ್ತದೆ? ಇಂತಹ ಅನೇಕ ಪ್ರಕರಣಗಳನ್ನು ನಾವು ಕೂತು ರಾಜಿ ಮಾಡಿ ತಿದ್ದಿ ಸರಿ ಮಾಡಿದ್ದೇವೆ. ಅದಕ್ಕೋಸ್ಕರ ಅಲ್ಲಿ ಯಾರು private ನವರು ಇದ್ದಾರೆ ಅವರನ್ನು ಖಾಯಂ ಮಾಡಿ. ಅವರಿಗೆ ಮಕ್ಕಳು ಮರಿಗಳೆಲ್ಲವೂ ಆಗಿದೆ. ಅವರ ಜೀವನ ಬಹಳ ಕಷ್ಟವಾಗಿದೆ. ಆದ್ದರಿಂದ ಅವರುಗಳನ್ನು ಖಾಯಂ ಮಾಡಿ ಅವರ ಆರ್ಥಿಕ ಪರಿಸ್ಥಿತಿ ಹಾಗೂ ಅವರ ಸಂಸಾರವನ್ನು ಸುಧಾರಿಸಿ. ಅವರನ್ನೂ ತಹಶೀಲ್ದಾರರ ಕೈ ಕೆಳಗೆ ಕೊಟ್ಟರೆ ಎಲ್ಲಾ ಪೋಡಿ ಕೆಲಸ ಅಚ್ಚುಕಟ್ಟಾಗುತ್ತದೆ. ನಿಮಗೂ ಒಳ್ಳೆಯ ಹೆಸರು ಬರುತ್ತದೆ. ರೈತರಿಗೂ ಒಳ್ಳೆಯದಾಗುತ್ತದೆ. ಅದಕ್ಕೋಸ್ಕರ ಆ ಪರಿಸ್ಥಿತಿಯನ್ನು ನಾವು ನೋಡಿ ನಿಮಗೆ ಹೇಳಿದ್ದು.

ಶ್ರೀ ಜಿ. ಕರುಣಾಕರರೆಡ್ಡಿ :- ಈ ರಾಜ್ಯದಲ್ಲಿ ಸುಮಾರು 25 ಲಕ್ಷ ಪೋಡಿ ಪ್ರಕರಣಗಳು ಬಾಕಿ ಇವೆ. ಅದನ್ನು clear ಮಾಡಬೇಕು. ರಾಜ್ಯದಲ್ಲಿ ಪೋಡಿ ಸಮಸ್ಯೆಯ ಬಗ್ಗೆ ಎಲ್ಲಾ ಶಾಸಕರಿಗೆ ಪತ್ರ ಬರೆದಿದ್ದೇನೆ. ಇದನ್ನು ಪರಿಹರಿಸಬೇಕು. ಮುಂದೆ ರೈತರಿಗೆ ಈ ಸಮಸ್ಯೆ ಇರಬಾರದು ಎನ್ನುವ ವಿಚಾರಕ್ಕೆ, licensed surveyorಗೆ ಕೆಲಸ ಸಿಗಬೇಕು, ಹಿಂದೆ ಅರ್ಜಿ ಕೊಟ್ಟವರು, ಹಿಂದೆ registration ಆಗಿದ್ದವುಗಳನ್ನು ಮಾಡುವುದಕ್ಕೋಸ್ಕರ licensed surveyors ಅನ್ನು ಮಾಡಿದ್ದೇವೆ. ಇವತ್ತು ಮಾನ್ಯ ಸದಸ್ಯರು licensed

surveyor ವಿಷಯದ ಬಗ್ಗೆ ಕಾಳಜಿಯನ್ನು ತೋರಿಸಿದ್ದೀರಿ ಅದರ ಬಗ್ಗೆ ಗಮನ ಹರಿಸುತ್ತೇವೆ. ಈಗಾಗಲೇ ಸರ್ಕಾರದ ವತಿಯಿಂದ ಸುಮಾರು 800 ಮಂದಿ surveyors ಅನ್ನು ನೇಮಕ ಮಾಡುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಒಪ್ಪಿದ್ದಾರೆ. ಹಣಕಾಸು ಇಲಾಖೆಯಿಂದ ಸುಮಾರು 400 ಮಂದಿಗೆ ನಿನ್ನೆ clearance ಮಾಡಿದ್ದಾರೆ. ಇನ್ನು ಉಳಿದವರ ಬಗ್ಗೆ ಕೂಡ ನಾವು ಗಮನ ಹರಿಸಿ Appointment ಮಾಡುತ್ತೇವೆ. ಒಟ್ಟಿನಲ್ಲಿ ಸರ್ಕಾರದಿಂದ ಹೆಚ್ಚಿನ surveyors ತೆಗೆದುಕೊಂಡು ತಾವು ಏನು ಕಳಕಳಿ ವ್ಯಕ್ತಪಡಿಸಿದ್ದೀರಿ ಅದನ್ನು ಸರಿ ಮಾಡುತ್ತೇವೆ. Licensed Surveyors ತಪ್ಪು ಮಾಡಿರುವ ಬಗ್ಗೆ ನನ್ನ ಗಮನಕ್ಕೆ ಬಂದರೆ ಖಂಡಿತ ಅವರ license ಅನ್ನು ರದ್ದು ಮಾಡಿ ಅವರ ಮೇಲೆ criminal ಮೊಕದ್ದಮೆ ಹೂಡಲು ಸರ್ಕಾರ ಯಾವುದೇ ರೀತಿಯಲ್ಲಿ ಹಿಂದು ಮುಂದು ನೋಡುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ :- Survey Departmentನಲ್ಲಿ ಜವಾನರಿಂದ ಹಿಡಿದು Driver ಗಳು surveyor ಗಳು ಕೆಲಸ ಮಾಡದೇ Strike ಮಾಡುತ್ತಿರುವುದರಿಂದ ಇಡೀ Survey Department ನಿಂತು ಹೋಗಿದೆ. ಈ ವಿಷಯದ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಜಿ. ಕರುಣಾಕರ ರೆಡ್ಡಿ :-ಇವತ್ತು ಗಮನಸೆಳೆಯುವ ವಿಚಾರದಲ್ಲಿ ಕೊಟ್ಟದ್ದು ಬೇರೆ ವಿಷಯ. ಆದರೆ, ತಾವು ಹೇಳಿರುವ ವಿಷಯ ಸರ್ಕಾರ ಗಮನದಲ್ಲಿದೆ. ಅದರ ಬಗ್ಗೆ ಮುಂದೆ ವಿಚಾರ ಮಾಡಿ ನಿರ್ಧಾರ ತೆಗೆದುಕೊಳ್ಳುತ್ತೇವೆ.

ಆ) ವಿಷಯ: ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಗ್ರಾಮೀಣ ಭಾಗದ ರೈತರ ಜಮೀನುಗಳಿಗೆ ಜವಳು ಉಂಟಾಗಿ ಕೃಷಿ ಹಾಗೂ ರಸ್ತೆಗಳು ಹಾಳಾಗುತ್ತಿರುವ ಬಗ್ಗೆ.

ಶ್ರೀ ಶ್ರೀಕಾಂತ್ ಕುಲಕರ್ಣಿ ಸುಬ್ಬರಾವ್ :- ಮಾನ್ಯ ಅಧ್ಯಕ್ಷರೆ, ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಸುತ್ತಮುತ್ತಲಿನ ಗ್ರಾಮಗಳ ರೈತರ ಜಮೀನುಗಳಿಗೆ ಜವಳು ಉಂಟಾಗಿ ಕೃಷಿ ಹಾಗೂ ರಸ್ತೆಗಳು ಹಾಳಾಗುತ್ತಿರುವ ಬಗ್ಗೆ.

ಮಾನ್ಯ ಜಲಸಂಪನ್ಮೂಲ ಸಚಿವರ ಗಮನ ಸೆಳೆಯುತ್ತೇನೆ.